ದಿನಾಂಕ 04-12-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋದಿಸಲಾಯಿತು.

<u>ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ</u>

1 ರಿಂದ 3 ನೇ ವಾದಿಗಳು ನನ್ನ ಅತ್ತಿಗೆಯ ಮಕ್ಕಳಾಗಬೇಕು. ಮೂಲ ಪುರುಷ ಕುಬ್ಯಾನಾಯ್ಕನಿಗೆ ಒಟ್ಟು 3 ಜನ ಹೆಂಡತಿಯರು ಎಂದರೆ ಸರಿ. ನಾನು 3 ನೇ ಹೆಂಡತಿಯ ಮಗ. ದಾವಾ ಆಸ್ತಿಯು ನನ್ನ ತಂದೆಗೆ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. 1939 ರಿಂದ ದಾವಾ ಆಸ್ತಿಯನ್ನು ನಮ್ಮ ಕುಟುಂಬದವರು ಸಾಗುವಳಿ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. 1 ರಿಂದ 3 ನೇ ವಾದಿಗಳು ನನ್ನ ತಂದೆಯ ಮೊದಲ ಹೆಂಡತಿ ಮಕ್ಕಳು ಎಂದರೆ ಸರಿ. 1975 ನೇ ಸಾಲಿನಲ್ಲಿ ನನ್ನ ತಂದೆ ಮರಣ ಹೊಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಮರಣದ ನಂತರ 1978 ರವರೆಗೆ ದಾವಾ ಆಸ್ತಿ ನನ್ನ ತಂದೆ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. ಆ ಕಾರಣ ದಾವಾ ಸ್ವತ್ತು ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ.

2. ನಾನು ದಾವಾ ಆಸ್ತಿಯ ಗೇಣಿದಾರನಾಗಿರುವುದಾಗಿ ಭೂ ನ್ಯಾಯಮಂಡಳಿಗೆ ಸುಳ್ಳು ಅರ್ಜಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಭೂ ನ್ಯಾಯ ಮಂಡಳಿಯಲ್ಲಿ ಆದ ಆದೇಶದ ಬಗ್ಗೆ ವಾದಿಯರಿಗೆ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ 1 ರಿಂದ 4 ನೇ ವಾದಿಯರಿಗೂ ಸಹ 1/12 ಹಿಸ್ಸೆ ಇರುತ್ತದೆ ಎಂದರೆ ಸರಿಯಲ್ಲ. 5 ರಿಂದ 7 ನೇ ವಾದಿಯರಿಗೆ 1/12 ಹಿಸ್ಸೆ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿಯರು ಸಾಗುವಳಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.